ರಾಯಚೂರು ಜಿಲ್ಲೆಯಲ್ಲಾದ ದರೋಡೆಗಳು

374 (619) ಶ್ರೀ ಡಿ. ಹಂಪನಗೌಡ (ಸಿಂಧನೂರು):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಎ) ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ನಡುವೆ ಹಿಂದೆ ನಡೆದ ದರೋಡೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

(ತಾಲ್ಲೂಕುವಾರು ಮಾಹಿತಿ ನೀಡುವುದು.)

(ಬಿ) ಸುತ್ತಮುತ್ತಲ ಗ್ರಾಮೆಗಳ ಜನತೆಗೆ ನೀಡಿದ ಭರವಸೆಗಳೇನು?

(ಸಿ) ದರೋಡೆ ವಿಷಯದಲ್ಲಿ ಎಷ್ಟು ಜನರನ್ನು ಬಂಧಿಸಲಾಗಿದೆ?

(ಡಿ) ದರೋಡೆಗೊಳಗಾದವರಿಗೆ ಸರ್ಕಾರದಿಂದ ಪರಿಹಾರವನ್ನೇನಾದರೂ ನೀಡಲಾಗಿದೆಯೆ?

(ಇ) ಹಾಗಿದ್ದಲ್ಲಿ, ದರೋಡೆಗಳನ್ನು ತಡೆಗಟ್ಟಲು ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಮತ್ತು ಪೋಲೀಸ್ ಸಿಬ್ಬಂದಿಗಳನ್ನು ಭರ್ತಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

(ಎ) ಹೌದು, ಬಂದಿದೆ. ಈ ದರೋಡೆಗಳ ಠಾಣಾವಾರು ಮತ್ತು ತಾಲ್ಲೂಕುವಾರು ಮಾಹಿತಿ ಕೆಳಗಿನಂತಿದೆ:-

ರಾಯಚೂರು ಜಿಲ್ಲೆ

ಠಾಣಾವಾರು ಮತ್ತು ತಾಲ್ಲೂಕುವಾರು ವೃತ್ತಿಪರ ದರೋಡೆಗಳು 1991 ಮತ್ತು 1992 (7-2-92) ರವರೆಗೆ.

	1991		1992	
ಆರಕ್ಷಕ ಠಾಣೆಗಳ ಹೆಸರು	ವರದಿ	ಪತ್ತೆ	ವರದಿ	ಪತ್ತೆ
1) ಗಂಗಾವತಿ	1	-	-	-
2) ಮುನಿರಾಬಾದ್	1	–	–	–
3) ತಾವರೇಗೆರೆ	1	–	–	–
4) ಸಿಂಧನೂರ್	4	2	–	–
5) ಎರಗೇರಾ	2	–	1	1
6) ಮಾನ್ವಿ	2	–	–	–
7) ರಾಯಚೂರು (ಪೆಸ್ಟ್)	1	–	–	–
8) ಮಸ್ಕಿ	1	–	–	–
9) ಸಿರವಾರ	1	–	–	–
ಒಟ್ಟು	14	2	1	1

ಬಳ್ಳಾರಿ ಜಿಲ್ಲೆ

ಠಾಣಾವಾರು ಮತ್ತು ತಾಲ್ಲೂಕುವಾರು ವೃತ್ತಿಪರ ದರೋಡೆಗಳು 1991 ಮತ್ತು 1992 (7–2–92) ರವರೆಗೆ

ಆರಕ್ಷಕ ಠಾಣೆಗಳ ಹೆಸರು	1991		1992	
	ವರದಿ	ಪತ್ತೆ	ವರದಿ	ಪತ್ತೆ
1) ಬಳ್ಳಾರಿ (ಗ್ರಾಮಾಂತರ)	6	5	–	–
2) ಕುರಗೋಡು	1	–	–	–
3) ಮೋಕಾ	2	2	–	–
4) ಹಲ್ವಾಗಲ್	1	–	–	–
5) ಕಾಲ್ಬಜಾರ್	4	3	–	–
6) ಸಿರಗುಪ್ಪ	4	3	–	–
7) ಗಾಂಧಿನಗರ	2	1	–	–
8) ಹೊಸಪೇಟೆನಗರ	2	–	–	–
9) ಹೊಸಪೇಟೆ (ಗ್ರಾಮಾಂತರ)	1	–	–	–
ಒಟ್ಟು	23	14	–	–

ಅ) ವೃತ್ತಿಪರ ದರೋಡೆಗಳನ್ನು ತನಿಖೆ ಮಾಡಲು, ಘಟಿಸಿದ ಪ್ರಕರಣಗಳನ್ನು ಪತ್ತೆ ಹಚ್ಚಲು ರಾಜ್ಯ ಪೋಲೀಸ್ ಹಾಗೂ ಅಂತರ್ ರಾಜ್ಯ ಪೋಲೀಸ್ ಅಧಿಕಾರಿಗಳನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಿ ಸಂಗ್ರಹಿಸಿದ ಮಾಹಿತಿಯನ್ನು ಒದಗಿಸಲು ಸಮನ್ವಯ ಕಾರ್ಯ ನೆರವೇರಿಸುವ ಸಲುವಾಗಿ ಒಂದು ಡಕಾಯಿತಿ ನಿರೋಧಕ ದಳವು ದಿನಾಂಕ 21-8-91 ರಿಂದ ಬಳ್ಳಾರಿಯಲ್ಲಿ ಕಾರ್ಯನಿರ್ವಹಿಸಲು ನೇಮಕಗೊಂಡಿದ್ದು ಒಬ್ಬ ಸೂಪರಿಂಟೆಂಡೆಂಟ್ ಆಫ್ ಪೋಲೀಸ್‌ರವರ ಮೇಲ್ವಿಚಾರಣೆಯಲ್ಲಿ ಒಬ್ಬ ಡಿ.ಎಸ್.ಪಿ., 4 ಪೋಲೀಸ್ ಇನ್ಸ್‌ಪೆಕ್ಟರ್‌ಗಳು ಸಹಾಯಕ ಸಿಬ್ಬಂದಿಯೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇದೇ ರೀತಿಯ ಕಾರ್ಯವ್ಯವಹಣೆ ನಡೆಸಲು ಗುಲ್ಬರ್ಗ ಪ್ರದೇಶಕ್ಕೆ ಒಬ್ಬ ಸೂಪರಿಂಟೆಂಡೆಂಟ್ ಆಫ್ ಪೋಲೀಸ್‌ರವರ ಮೇಲ್ವಿಚಾರಣೆಯಲ್ಲಿ 2 ಡಿ.ಎಸ್.ಪಿ.ಗಳು, 4 ಪೋಲೀಸ್ ಇನ್ಸ್‌ಪೆಕ್ಟರ್‌ಗಳು, 8 ಸಿ.ಪಿ.ಸಿ.ಗಳು ಮತ್ತು ಪೂರಕ ಸಿಬ್ಬಂದಿಯ ಮಂಜೂರಾತಿಗೆ ಪರಿಶೀಲಿಸಲಾಗುತ್ತಿದೆ.

ತಾ: 6–2–92 ರಂದು ಗೃಹ ಮಂತ್ರಿಗಳು ವೃತ್ತಿಪರ ದರೋಡೆ ಪ್ರಕರಣಗಳನ್ನು ಚರ್ಚಿಸುವ ಸಲುವಾಗಿ ನಡೆದ ಸಭೆಯಲ್ಲಿ ಭಾಗವಹಿಸಿದ್ದು, ಕರ್ನಾಟಕ ರಾಜ್ಯದ ಡೈರಕ್ಟರ್ ಜನರಲ್ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು, ಸಿಓಡಿ ವಿಭಾಗದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರು ಪೂರ್ವ ಹಾಗೂ ಈಶಾನ್ಯ ವಿಭಾಗದ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ಗಳು, ಜಿಲ್ಲಾ ಪೋಲೀಸ್ ಅಧಿಕಾರಿಗಳು ಡಕಾಯಿತಿ ಪ್ರತಿಬಂಧಕ ದಳದ ಸಿಓಡಿ ವಿಭಾಗದ ಅಧಿಕಾರಿಗಳು ಭಾಗವಹಿಸಿ, 1991ನೇ ಸಾಲು ಹಾಗೂ ಪ್ರಸಕ್ತ ಸಾಲಿನಲ್ಲಿ ನಡೆದ ವೃತ್ತಿಪರ ಡಕಾಯಿತಿಗಳನ್ನು ವಿವರವಾಗಿ ಚರ್ಚಿಸಿ ಘಟಿಸಿದ ಪ್ರಕರಣಗಳ ಪತ್ತೆ ಹಾಗೂ ಪ್ರಕರಣಗಳು ನಡೆಯದಂತೆ ಕೈಗೊಳ್ಳಬೇಕಾದ ಕ್ರಮಗಳನ್ನು ವಿವರವಾಗಿ ಚರ್ಚಿಸಲಾಯಿತು.

ರಾತ್ರಿ ವೇಳೆ ದೂರದೂರದ ಸ್ಥಳಗಳಿಗೆ ಸಂಚರಿಸುವ ಬಸ್‌ಗಳನ್ನು ಕಾನ್‌ವಾಯ್ ರೀತಿಯ ವ್ಯವಸ್ಥೆ ಮಾಡಿ ಶಸ್ತ್ರಸಜ್ಜಿತ ಪೋಲೀಸರ ಕಾವಲಿನೊಂದಿಗೆ ಕಳುಹಿಸುವ ವಿಷಾಡನ್ನೂ ಸಹಾ ಮಾಡಿದೆ.

ಇ) ರಾಯಚೂರು ಜಿಲ್ಲೆಯಲ್ಲಿ 1991ನೇ ಸಾಲಿನಲ್ಲಿ ದರೋಡೆಕೋರರನ್ನು ಬಂಧಿಸಿರುವುದಿಲ್ಲ.

1992ನೇ ಸಾಲಿನಲ್ಲಿ ಒಟ್ಟು 9 ಜನರನ್ನು ಬಂಧಿಸಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ 1991ನೇ ಸಾಲಿನಲ್ಲಿ ಒಟ್ಟು 29 ದರೋಡೆಕೋರರನ್ನು ಬಂಧಿಸಲಾಗಿದೆ. 1992ನ ಸಾಲಿನಲ್ಲಿ ಯಾರನ್ನು ಬಂಧಿಸಿಲ್ಲ.

ಈ) ಈ ರೀತಿಯ ಪರಿಹಾರವನ್ನು ನೀಡಲು ಅವಕಾಶವಿರುವುದಿಲ್ಲ.

ಉ) ಹೌದು, ಇದೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಅಭಿವೃದ್ಧಿ

375 (878) ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆ 1989-90, 1990-91 ಹಾಗೂ 1991-92ರ ಜನವರಿ 31ರ ವರೆಗೆ ವಿವಿಧ ಬಾಬ್ತುಗಳಿಂದ ಬಂದಿರುವ ಒಟ್ಟು ಆದಾಯವೆಷ್ಟು?

ಆ) ಮೇಲ್ಕಂಡ ಅವಧಿಯಲ್ಲಿ ಸಿಬ್ಬಂದಿ ಸಂಬಳಕ್ಕೆ ಖರ್ಚಾದ ಹಣವೆಷ್ಟು?

ಇ) ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿ ರಸ್ತೆಗಳು ಮತ್ತು ನೀರು ಸರಬರಾಜು ಮಾಡುವ ಪೈಪುಗಳು ಹಾಳಾಗಿ ಕುಡಿಯುವ ನೀರಿನ ಸಮರ್ಪಕ ಸರಬರಾಜಿಲ್ಲದೆ ಜನರಿಗೆ ಬಹಳ ತೊಂದರೆಯಾಗಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ ಮೇಲ್ಕಂಡ ಅಭಿವೃದ್ಧಿ ಕಾರ್ಯಗಳಿಗಾಗಿ ಪ್ರತಿವರ್ಷ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ?

ಉ) ಪ್ರಸಕ್ತ ವರ್ಷದಲ್ಲಿ ಮಹಾನಗರ ಪಾಲಿಕೆ ವತಿಯಿಂದ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ?

ಊ) ಇದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಲಾಗುವುದು? ಈಗ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಸನ್ 1989-90, 90-91 ಹಾಗೂ 1991-92ರ ಜನವರಿ 31ರವರೆಗೆ ವಿವಿಧ ಬಾಬ್ತುಗಳಿಂದ ಬಂದ ಆದಾಯದ ವಿವರವು ಈ ಕೆಳಗಿನಂತಿದೆ.

ವಿವಿಧ ಬಾಬ್ತುಗಳು	1989-90	1990-91	1991-92ರ ಜನವರಿ31ರ ವರೆಗೆ	ಒಟ್ಟು
1) ಆಸ್ತಿಗಳ ತೆರಿಗೆ	18417.319	14684.252	13047.635	46149.206
2) ಮೀಟರದಿಂದ ಬಳಕೆಯಾದ ನೀರಿನ ತೆರಿಗೆ	9552.942	8320.086	8575.305	26448.333
3) ಮಾರುಕಟ್ಟೆಗಳ ಸ್ಟಾಲುಗಳ ಮಸೂಲಿ	6087.911	4957.979	5801.151	16847.041
4) ಸರ್ಕಾರವು ನೀಡುವ ತೆರಿಗೆಗಳಲ್ಲಿ ಮಹಾನಗರಸಭೆಯ ಪಾಲು	73521.081	76592.545	58286.861	208400.487